# ನಾಗಿ ಮತ್ತವಳ ಕತ್ತೆ!

■ ಶಿ.ಜು. ಪಾಶ

ಕಲೆ: ನಾಮದೇವ ಕಾಗದಗಾರ



ಮೈಸೂರು ದಸರಾ ಎಂದ ಕೂಡಲೇ ಆನೆ ನೆನಪಾಗೋದು ಸಹಜವೋ ರೂಢಿಗತವೋ ಆಗಿದೆಯಲ್ಲ, ಹಾಗೆಯೇ ನಾಗಿ ಎಂದ ಕೂಡಲೇ ಕತ್ತೆ ನೆನಪಾಗಿಬಿಡುತ್ತೆ. ಕೆರೆ ಅಂಗಳ ಬಡಾವಣೆಯ ಜನರಿಗೆ! ಮೈಸೂರು ದಸರಾದ ಗಜಪಡೆ ಎಲ್ಲಿ? ನಾಗಿ ಎಂಬೋಳ ಕತ್ತೆ ಪಡೆ ಎಲ್ಲಿ? ಎಲ್ಲಿಂದೆಲ್ಲಿಯ ಸಂಬಂಧ ಮಾರಾಯ? ನಿಂಗೊಂದು ಹುಚ್ಚು ಎಂದು ಬೈಯ್ದುಕೊಳ್ಳುವ ಮುನ್ನ ಮೊದಲು ಸಂಪೂರ್ಣವಾಗಿ ನಾಗಿ ಮತ್ತವಳ ಕತ್ತೆ ಪಡೆಯ ಜಾನಕಾರಿ ತಿಳಿದುಕೊಂಡು ಬಿಡಿ. ಆಗ ನಿಮಗೂ ಒಳ್ಳೇದು, ಬೈಸಿಕೊಳ್ಳಬಹುದಾದ ನನಗೂ ಒಳ್ಳೇದು...

ಅವಳ ಹೆಸರು ನಾಗಿ. ನಾಗರಹಾವಿನಂತೆ ಬುಸುಗುಡುತ್ತಿದ್ದುದಕ್ಕೆ ಅವಳಿಗೆ ಆ ಹೆಸರು ಬಂತೋ, ನಾಗರಹಾವಿನಂತೆಯೇ ಜಡೆ ಹೊಂದಿದ್ದಕ್ಕೆ ಆ ಹೆಸರು ಅವಳಿಗೆ ಅಂಟಿಕೊಂಡಿತೋ ನಾನಿನ್ನೂ ಕೂಸಿದ್ದಾಗಲಿಂದ ಗೊಂದಲದಲ್ಲಿಯೇ ಇದ್ದೇನೆ. ನಾ ಕಣ್ಣು ಬಿಟ್ಟೆದಾಗಿನಿಂದಲೂ ನಾಗಿ ಮತ್ತು ಅವಳ ಜೊತೆ ಒಂದಿಷ್ಟು ಕತ್ತೆಗಳನ್ನು ನೋಡಿದ್ದೇನೆ. ಅವಳ ಬಗ್ಗೆ ಮತ್ತು ಅವಳ ಕತ್ತೆಗಳ ಬಗ್ಗೆ ತಣಿಯದ ಕುತೂಹಲವನ್ನಿಟ್ಟುಕೊಂಡೇ ಬೆಳೆಯುತ್ತಾ ಬಂದಿದ್ದೇನೆ. ನಾಲ್ಕಾರು ಕತ್ತೆಗಳ ಒಡತಿಯಾಗಿದ್ದ ನಾಗಿ ತನ್ನದೇ ಒಂದು ಭಿನ್ನ ಲೋಕವನ್ನು ಕೆರೆ ಅಂಗಳದಲ್ಲಿ ಸೃಷ್ಟಿಸಿಕೊಂಡಿದ್ದಳು. ಅವಳೂ ಒಂದು ಕತ್ತೆಯಂತೆಯೇ ದುಡಿಯುತ್ತಿದ್ದಳು. ಅಲ್ಲಾ ಮತ್ತು ಹುಂಜ ಒಟ್ಟೊಟ್ಟಿಗೆ ಕೂಗು ಹಾಕಿದ ಕೂಡಲೇ ಧಡಕ್ಕನೆ ಎದ್ದು ಕುಳಿತು, ದಿಂಬು–ಹಾಸಿಗೆ ಎತ್ತಿಟ್ಟು, ನಡುಬಗ್ಗಿಸಿ ಝಾಡೂ ಚಲಾಯಿಸಿ, ಅಂಗಳಕ್ಕೆ ಬಂದು ನೀರು ಚುಮುಕಿಸಿಬಿಟ್ಟರೆ ಆಮೇಲೆಲ್ಲ ನಾಗಿಯದು ಕತ್ತೆಗಳ ಜೊತೆಗಿನದೇ ಲೋಕವ್ಯವಹಾರ.

ಹುಲ್ಲು–ನೀರಿಟ್ಟು ಕತ್ತೆಗಳಿಗೆ 'ಹುರ್ರ... ಹುರ್ರಾ...' ಎಂದುಬಿಟ್ಟರೆ ನಾಗಿ, ಕತ್ತೆಗಳು ತಿಂದು ಮುಗಿಸಿ ಕರ್ತವ್ಯಪಾಲನೆಗೆ ಸಿದ್ಧವಾಗಿಬಿಡುತ್ತಿದ್ದವು. ಅವಳಿಗೆ ಗಂಡನಿರಲಿಲ್ಲ. ಅವನಿದ್ದರೂ ಇಲ್ಲದಿದ್ದರೂ ಕತ್ತೆಗೇನೂ ಸಮನಿರಲಿಲ್ಲ. ಕುಡಿಯೋದೇ ಕಾಯಕ ಮಾಡಿಕೊಂಡಿದ್ದ. ಕುಡಿದು ಟೈಟಾಗಿ ಅದೊಂದು ದಿನ ಚರಂಡಿಗೆ ಕಾಲಿಟ್ಟು ತಲೆಯೊಡೆದುಕೊಂಡು ಸತ್ತುಹೋಗಿದ್ದ. ಇದು ನಾಗಿಯ ಖಾಸಗಿ ಸ್ಟೋರಿ. ತನ್ನ ಗಂಡನ ಹಿಂಸೆಯಿಂದ ಪಾರಾದ ನಾಗಿಗೆ ಮಕ್ಕಳೂ ಇರಲಿಲ್ಲ. ಮಕ್ಕಳಂತೆ ಇದ್ದು ದುಡಿದು ಅನ್ನ ಹಾಕುತ್ತಿರುವುದೆಲ್ಲ ಈಗ ಈ ಕತ್ತೆಗಳೇ.

ಅವತ್ತೊಂದಿನ ನಾಗಿಯ ಜೋಪಡಿಯಂಥ ಮನೆಮುಂದೆ ಜನವೋ ಜನ. ಮುಖಕ್ಕೆ ಮಸಿಬಳಿದು, ಹರಕು ಮುರುಕು ಚಪ್ಪಲಿಗಳನ್ನು ಪೋಣಿಸಿ ಮಾಡಿದ್ದ ಹಾರ ಏರಿಸಿ ಪುರುಷನೊಬ್ಬನನ್ನು ನಾಗಿ ಮನೆ ಬಳಿ ಎಳೆದು ತಂದಿದ್ದರು. ಇದ್ಯಾಕಪ್ಪಾ ಆ ವ್ಯಕ್ತಿಯನ್ನು 'ವಿಶೇಷ ಪೂಜೆ'ಗೊಳಪಡಿಸಿ ನಾಗಿ ಮನೆ ಬಳಿ ಎಳೆದೆಳೆದು ತಂದಿದ್ದಾರಲ್ಲಾ? ಎಂಬ ಕುತೂಹಲ ಇಡೀ ಕೆರೆಯಂಗಳದ ತುಂಬಾ ಮನೆಮಾಡಿತ್ತು. ಕುತೂಹಲದ ಬಲೆ ಬಿಡಿಸಿದಾಗಲೇ ಗೊತ್ತಾಗಿದ್ದು; ಹೆಣ್ಣೊಬ್ಬಳ ಜೊತೆ ಅಕ್ರಮ ಕಾಮಕ್ಕೊಳಗಾಗಿದ್ದ ಪುರುಷ ಅವನು. ಅವನಿಗೆ ಮಸಿಬಳಿದು, ಚಪ್ಪಲಿ ಹಾರ ಹಾಕಿ, ಕತ್ತೆ ಮೇಲೆ ಊರತುಂಬಾ ಮೆರವಣಿಗೆ ಮಾಡಿಸೋ ಇರಾದೆಯಿಂದ ಅಲ್ಲಿ ಜನ ಜಮಾಯಿಸಿದ್ದರು. ಅವರಿಗೆ ನಾಗಿಯ ಕತ್ತೆ ಬೇಕಿತ್ತು, ಮೆರವಣಿಗೆಗೆ! ಯಾರೋ ಮಾಡಿದ ಪಾಪಕ್ಕೆ ಪಾಪಿಯನ್ನೇ ತನ್ನ ಮೇಲೆ ಹೊತ್ತು ಮೆರವಣಿಗೆ ಮಾಡಬೇಕಾದ ಶಿಕ್ಷೆಗೆ ಕತ್ತೆ ಗುರಿಯಾಗಿತ್ತು ಅವತ್ತು!

ಜನ ಪುರುಷನ ಪೂರ್ತಿ ಕಥೆ ಹೇಳಿ, 'ಮೆರವಣಿಗೆಗೆ ಕತ್ತೆ ಕೊಡು. ಮೆರವಣಿಗೆ ಮಾಡಿ ಬುದ್ಧಿ ಕಲಿಸದಿದ್ದರೆ ನಮ್ ಕೆರೆಅಂಗಳ ಹಾಳಾಗಿ ಹೋಗುತ್ತೆ' ಅಂತೆಲ್ಲ ನಾಗಿಯ ಮುಂದೆ ಮನವಿಗಳನ್ನು ಅರ್ಪಿಸಿದ್ದರು. ಇಂಥದ್ದನ್ನೆಲ್ಲ ಅದೆಷ್ಟು